## Kannada Prabha

**Date:** 23-08-2018 **Page No:** 05

**Edition:** Mysore **Language:** Kannada

# ಬಂಡವಾಳ ಹೂಡಿಕೆ ಅರಿವು ಕಾರ್ಯಕ್ರಮ

**ಮೈಸೂರು:** ನಗರದ ಚಾಮುಂಡಿಬೆಟ್ಟದಲ್ಲಿರುವ ಎಸ್ ಡಿಎಂ ಐಎಂಡಿಯಲ್ಲಿ ಎನ್‌ಎಸ್‌ಇ ಮತ್ತು ಎನ್‌ಎಸ್ ಡಿಎಲ್ ಸಹಯೋಗದೊಂದಿಗೆ ಆ.23ರಂದು ಬಂಡವಾಳ ಹೂಡಿಕೆ ಬಗ್ಗೆ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಹಾಯಕ ಪ್ರಾಧ್ಯಾಪಕ ಡಾ. ಎಂ. ಶ್ರೀರಾಮ್ ತಿಳಿಸಿದರು.

ಆ.23ರಂದು ದಿನಪೂರ್ತಿ ಬಂಡವಾಳ ಮಾರುಕಟ್ಟೆಯಲ್ಲಿ ಹಣ ಹೂಡುವ ಬಗೆಗ ಅರಿವು ಮೂಡಿಸಲಾಗುವುದು. ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದ್ದು, ಕಾರ್ಯಕ್ರಮಕ್ಕೆ ನೋಂದಣಿಯ ಅವಶ್ಯಕತೆ ಇಲ್ಲ. ಬಂಡವಾಳ ಹೂಡಿಕೆ ಕುರಿತು ಬಹುಆಯಾಮದಲ್ಲಿ ಚರ್ಚೆ, ಸಂವಾದ ನಡೆಯಲಿದೆ. ಪ್ರಶ್ನೋತ್ತರ ಅವಧಿಯೊಂದಿಗೆ ಸಂಜೆ 6 ಗಂಟೆಗೆ ಕಾರ್ಯಕ್ರಮ ಮುಕ್ತಾಯವಾಗಲಿದೆ ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಹೆಚ್ಚಿನ ಮಾಹಿತಿಗೆ ಮೊ. 9036096366, 9902025624 ಸಂಪರ್ಕಿಸಬಹುದು.